ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 3954
ಸದಸ್ಯರ ಹೆಸರು : ಶ್ರೀ ಡಿ.ಆರ್. ಪಾಟೀಲ್(ಗದಗ್)
ಉತ್ತರಿಸುವ ದಿನಾಂಕ : 04.07.2005
ಉತ್ತರಿಸುವವರು : ಉಪಮುಖ್ಯಮಂತ್ರಿಗಳು

ಸಂಖ್ಯೆ	ಪ್ರಶ್ನೆ	ಉತ್ತರ
1	ಪ್ರಸಕ್ತ ಹಣಕಾಸು ವರ್ಷದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆ ಮೂಲಕ ಮಾಡುವ ಯೋಜನಾ ವೆಚ್ಚ ಎಷ್ಟು?	ರೂ. 2880.29 ಕೋಟಿ
2	ಕಳೆದ ವರ್ಷಕ್ಕೆ ಹೋಲಿಸಿದರೆ ಈ ಯೋಜನಾ ವೆಚ್ಚದಲ್ಲಿ ಆಗಿರುವ ಹೆಚ್ಚಳ ಎಷ್ಟು;	ರೂ 1285.34 ಕೋಟಿ(80.6%)
3	ಗ್ರಾಮೀಣ ಪ್ರದೇಶದಲ್ಲಿ ಯೋಜನೆಗಳು ಕೆಳಹಂತದಿಂದ (ಗ್ರಾಮಸಭೆ) ರೂಪುಗೊಳ್ಳಲು ಯೋಜನಾ ಇಲಾಖೆ ಕೈಕೊಳ್ಳಲಿರುವ ಕ್ರಮಗಳಾವುವು?	ಮೂರು ಹಂತದ ಪಂಚಾಯತ್ ರಾಜ್ ಸಂಸ್ಥೆಗಳ ಯೋಜನೆಗಳನ್ನು ಕೆಳಮಟ್ಟದಿಂದ ರೂಪಿಸಲು ಸರ್ಕಾರವು ವಿವರವಾದ ಮಾರ್ಗಸೂಚಿಯನ್ನು ನೀಡಿದೆ.
4	ಗ್ರಾಮೀಣ ಜನತೆಯ ಅವಶ್ಯಕತೆ ಆಧರಿಸಿ, ಆಒ\/ತೆಗಳನ್ನು ಗುರುತಿಸಿ, ಯೋಜನೆಗಳನ್ನು ರೂಪಿಸಲು ಬೇಕಾಗುವ ಹಣಕಾಸನ್ನು (ಅನ್ ಟೈಡ್) ಯಾವ ನಿರ್ಬಂಧಗಳಿಲ್ಲದೆ ಬಳಸಿಕೊಳ್ಳಲು ಸಾಕಷ್ಟು ಹಣ ಬಿಡುಗಡೆ ಮಾಡಲು ಸರ್ಕಾರ ಕ್ರಮ ಕೈಗೊಳ್ಳಲಾಗುವುದೇ;	2005-06ನೇ ಸಾಲಿಗೆ ಗ್ರಾಮ ಪಂಚಾಯತ್ ಯೋಜನಾ ಕಾರ್ಯಕ್ರಮಗಳಿಗೆ 965 ಕೋಟಿ ರೂ.ಗಳನ್ನು ನಿಗದಿಪಡಿಸಲಾಗಿದೆ. ಈ ಮೊತ್ತವು ಪ್ರತಿ ಗ್ರಾಮ ಪಂಚಾಯತ್‌ಗೆ ನಿಗದಿಪಡಿಸಿದ 5 ಲಕ್ಷ ರೂ.ಗಳ ನಿರ್ಬಂಧರಹಿತ (ಅನ್‌ಟೈಡ್) ಅನುದಾನವನ್ನು ಒಳಗೊಂಡಿರುತ್ತದೆ. ವಿವಿಧ ಕಾರ್ಯಕ್ರಮಗಳಿಗೆ ಪ್ರತಿ ಗ್ರಾಮ ಪಂಚಾಯಿತಿಗೆ ಸರಾಸರಿ 17 ಲಕ್ಷ ರೂ.ಗಳು ಲಭ್ಯವಾಗುತ್ತವೆ. ಚಟುವಟಿಕೆ

ಸಂಖ್ಯೆ	ಪ್ರಶ್ನೆ	ಉತ್ತರ
		ನಕ್ಷೆ ಮತ್ತು ನಿರ್ಬಂಧರಹಿತ (ಅನ್‌ಟೈಡ್) ಅನುದಾನವನ್ನಾಧರಿಸಿ ಹಣವನ್ನು ವಿನಿಯೋಗಿಸಲು ಗ್ರಾಮ ಪಂಚಾಯಿತಿಗಳಿಗೆ ಸ್ವಾತಂತ್ರ್ಯವನ್ನು ನೀಡಲಾಗಿದೆ.
5	ಹಾಗಿದ್ದಲ್ಲಿ ಮುಂದಿನ ಹಣಕಾಸು ವರ್ಷದಿಂದ ಈ ವ್ಯವಸ್ಥೆಯನ್ನು ಮಾಡಲಾಗುವುದೇ?	ಉದ್ಭವಿಸುವುದಿಲ್ಲ.

ಪ್ರಶ್ನೆಯ ಸಂಖ್ಯೆ:3954

ಉತ್ತರಲಗತ್ತಿಸಿದೆ

ಶ್ರೀ ಡಿ.ಆರ್. ಪಾಟೀಲ್: ಮಾನ್ಯ ಉಪಾಧ್ಯಕ್ಷರೇ, ಗ್ರಾಮಪಂಚಾಯಿತಿಗಳಿಗೆ ಯೋಜನೆ ಹಣವನ್ನೇನೋ ಬಿಡುಗಡೆ ಮಾಡುತ್ತೀರಿ, ಅದನ್ನು ಪೂರ್ತಿ ಆನ್‌ಟೈಡ್ ಮಾಡಲು ಏನು ತೊಂದರೆ ಇದೆ? ಗ್ರಾಮ ಪಂಚಾಯಿತಿಗೆ ಕೊಡುವ ಹಣವನ್ನು ಪೂರ್ತಿಯಾಗಿ ಅನ್‌ಟೈಡ್ ಗ್ರಾಂಟ್ ಮಾಡಲು ಸರ್ಕಾರಕ್ಕೆ ತೊಂದರೆಯೇನು?

ಶ್ರೀ ಸಿದ್ಧರಾಮಯ್ಯ (ಉಪಮುಖ್ಯಮಂತ್ರಿಗಳು): ಮಾನ್ಯ ಉಪಾಧ್ಯಕ್ಷರೆ, ಗ್ರಾಮಪಂಚಾಯಿತಿಗೆ ಪ್ರತಿ ವರ್ಷ 28 ಲಕ್ಷ ರೂಪಾಯಿಗಳು ಹೋಗುತ್ತದೆ. ಈ ವರ್ಷದಿಂದ 28 ಹೋಗುತ್ತದೆ, ಅದರಲ್ಲಿ ಐದು ಲಕ್ಷ ರೂಪಾಯಿ ಅನ್‌ಟೈಡ್ ಗ್ರಾಂಟ್ಸ್ ಇದೆ. ಅಂದರೆ ಐದು ಲಕ್ಷ ರೂಪಾಯಿಗಳನ್ನು ಪಂಚಾಯಿತಿಗಳು ಕೊಡಬೇಕೆಂದು ಇದೆಯಲ್ಲ ಅದು ಇದೆ. ಎಸ್.ಜಿ.ಆರ್.ವೈ.ನಲ್ಲಿ ಬರತಕ್ಕ ಹಣ ಮತ್ತು ಬೇರೆ ಬೇರೆ ಸ್ಟೇಟ್ ಕ್ಯಾಪಿಟ್ ಅಕೌಂಟ್ಸ್‌ನಲ್ಲಿ ಖರ್ಚಾಗತಕ್ಕ ಹಣ ಇವೆಲ್ಲವೂ ಪಂಚಾಯಿತಿಗಳೆ ಖರ್ಚು ಮಾಡುತ್ತವೆ, ಪ್ಲಾನನ್ನೂ ಅವರೆ ಮಾಡುತ್ತಾರೆ. ಆದರೆ, ಅವುಗಳನ್ನೆಲ್ಲ ಏಕೆ ಆನ್‌ಟೈಡ್ ಮಾಡಲು ಆಗುವುದಿಲ್ಲವೆಂದರೆ, ಬೇರೆ ಬೇರೆ ಸ್ಕೀಮ್‌ಗಳಲ್ಲಿ ಇವೆಲ್ಲಾ ಹಣ ಬರುವುದರಿಂದ ಅಷ್ಟನ್ನು ಕೂಡ ಅವರಿಗೆ ಅನ್‌ಟೈಡ್ ಎಂದು ಕೊಡಲು ಬರುವುದಿಲ್ಲ. ಆ ನಾರ್ಮ್ಸ್‌ನ ಪ್ರಕಾರ ಮಾಡಬೇಕಾಗುತ್ತದೆ. ಈಗ ಹೆಚ್ಚು ಅದಕ್ಕೋಸ್ಕರವೆ ನಾವು

ಪಂಚಾಯಿತಿಗಳಿಗೆ ಹೆಚ್ಚು ಶಕ್ತಿ ಇರಬೇಕು ಎಂಬ ಕಾರಣಕ್ಕೋಸ್ಕರವೇ 137 ಸ್ಟೇಟ್ ಸೆಕ್ಟಾರ್‌ನಲ್ಲಿದ್ದ ಕಾರ್ಯಕ್ರಮ ಗಳನ್ನೆಲ್ಲಾ ವರ್ಗಾವಣೆ ಮಾಡಿಬಿಟ್ಟಿದ್ದೇವೆ. ಡಿಸ್ಟ್ರಿಕ್ಟ್ ಪಂಚಾಯಿತಿಗೆ, ತಾಲ್ಲೂಕು ಪಂಚಾಯಿತಿಗೆ, ಗ್ರಾಮಪಂಚಾಯಿತಿಗೆ ವರ್ಗಾವಣೆ ಮಾಡಿದ್ದೇವೆ. ತಾವು ಹೇಳುವುದು ಇನ್ನೂ ಹೆಚ್ಚು ಕೊಡಬೇಕು ಎಂಬ ಬಗ್ಗೆ ಪರಿಶೀಲನೆ ಮಾಡೋಣ, ಯಾವ ರೀತಿ ಮಾಡಬೇಕೆಂದು. ಸದ್ಯಕ್ಕೆ ಇಷ್ಟು ಮಾಡಿದ್ದೇವೆ, 28 ಲಕ್ಷ ಈಗ ಗ್ರಾಮ ಪಂಚಾಯಿತಿಗೆ ಹಣ ಬರುತ್ತಿದೆ. ಹೆಚ್ಚು ಅವರಿಗೆ ಪ್ಲಾನಿಂಗ್ ಮಾಡಲು ಕಾರ್ಯಕ್ರಮಗಳನ್ನು ಅಲ್ಲಿ ನೋಡಿಕೊಂಡು. ಸ್ಥಳೀಯ ಸಮಸ್ಯೆಗಳನ್ನು ನೋಡಿಕೊಂಡು, ಶೆಡ್ಯೂಲ್ಡ್ ಕಾಸ್ಟ್‌ನವರು ಎಷ್ಟಿದ್ದಾರೆ.

ಅಗ್ರಿಕಚ್ಚರಲ್ ಲೇಬರರ್ಸ್ ಎಷ್ಟಿದ್ದಾರೆ, ಪರಿಶಿಷ್ಟ ಜಾತಿಯವರು ಎಷ್ಟು ಇದ್ದಾರೆ, ಆನ್ ಗೋಯಿಂಗ್ಸ್ ವರ್ಕ್ಸ್ ಎಷ್ಟಿದೆ. ಸ್ಟಲ್ಲೋವರ್ ವರ್ಕ್ಸ್ ಎಷ್ಟಿದೆ. ಇವೆಲ್ಲವನ್ನು ನೋಡಿಕೊಂಡು ಪ್ಲಾನಿಂಗ್ ಮಾಡುತ್ತಿದ್ದಾರೆ. ನೀವು ಹೇಳತಕ್ಕ ಅಭಿಪ್ರಾಯವನ್ನು ನಾನು ಗಮನದಲ್ಲಿಟ್ಟುಕೊಂಡು ಈ ಸಲ ಪ್ಲಾನ್ ಮಾಡುವಾಗ ಅದನ್ನು ಪರಿಶೀಲನೆ ಮಾಡುತ್ತೇನೆ ಎಂಬ ಮಾತನ್ನು ಹೇಳುತ್ತೇನೆ.

ಶ್ರೀ ಡಿ.ಆರ್. ಪಾಟೀಲ್: ಈ ವರ್ಷ ಅಬ್ಕಾರಿ ಆದಾಯ ಸಾಕಷ್ಟು ಮಾಡಿದ್ದೀರಿ. ದಯವಿಟ್ಟು ಅದರಲ್ಲಿ ಸ್ವಲ್ಪ ಪಾಲು ಅನುದಾನ ಗ್ರಾಮ ಪಂಚಾಯಿತಿಗೆ ಹೆಚ್ಚು ಮಾಡಿದ್ದೀರಿ ಎಂದರೆ ಜನರು ನಿಮ್ಮನ್ನು ನೆನೆಸುತ್ತಾರೆ.

ಶ್ರೀ ಸಿದ್ಧರಾಮಯ್ಯ: ಕಳೆದ ಬಾರಿಗೂ ಇವತ್ತಿಗೂ ಸುಮಾರು 1285 ಕೋಟಿಯನ್ನು ಹೆಚ್ಚು ಮಾಡಿದ್ದೇವೆ. ಹೋದ ವರ್ಷ 1595ಕೋಟಿ ಇತ್ತು. ಒಟ್ಟು ಪ್ಲಾನ್ ಪಂಚಾಯಿತಿ ಇನ್‌ಸ್ಟಿಟ್ಯೂಷನ್ಸ್‌ಗಳಿಗೆ, ಈ ಸಲ 2880 ಕೋಟಿ ಯಾಗಿದೆ. ಅಂದರೆ ಸುಮಾರು 1285 ಕೋಟಿ. ಒಂದೇ ವರ್ಷದಲ್ಲಿ more than 80 percent ಹೆಚ್ಚಾಗಿದೆ, ಇನ್ನೂ ಹೆಚ್ಚು ಮಾಡಬೇಕೆಂದು ಹೇಳುತ್ತಿದ್ದಾರೆ, ಹಣಕಾಸಿನ ರಿಸೋರ್ಸ್‌ನ್ನು ನೋಡಿಕೊಂಡು ಅದರ ಮೇಲೆ ತೀರ್ಮಾನ ಮಾಡುತ್ತೇವೆ. ಯಾವಾಗಲೂ ಗ್ರಾಮೀಣ ಅಭಿವೃದ್ಧಿಯಾಗ ಬೇಕು, ಇನ್ನೂ ಮೂಲಭೂತ ಸೌಕರ್ಯಗಳು ಸಿಕ್ಕಿಲ್ಲ, ನೀವು ಹೇಳುವುದೆಲ್ಲಾ ನಿಜ, ನಿಮ್ಮ ಕಳಕಳಿಯೆ ನಮಗೂ ಇದೆ, ಹಳ್ಳಿಗಾಡಿನ ಅಭಿವೃದ್ಧಿಯಾಗಬೇಕು. ಡಿ. ಆರ್. ಪಾಟೀಲರು ಜಿಲ್ಲಾಪಂಚಾಯಿತಿ ಸದಸ್ಯರಾಗಿ ಕೆಲಸ ಮಾಡಿದ್ದಾರೆ, ಹಳ್ಳಿಗಾಡು

ಗೊತ್ತಿದೆ. ಎಂ.ಎಲ್.ಎ. ಅವರಿಗೆಲ್ಲಾ ಗೊತ್ತಿರುವುದರಿಂದ, ನಾನು ತಾಲ್ಲೂಕು ಅಭಿವೃದ್ಧಿ ಮಂಡಳಿಯ ಸದಸ್ಯನಾಗಿದ್ದೆ. ಒಂದು ಕಾಲದಲ್ಲಿ 1978 ರಿಂದ 1983ರವರೆಗೆ, ಗೊತ್ತಿದೆ ಹಳ್ಳಿಗಾಡಿನಲ್ಲಿ ಏನೇನು ಆಗುತ್ತದೆ ಎಂದು. ಅದಕ್ಕೋಸ್ಕರವೆ ನಾನು ಪ್ಲಾನ್‌ನಲ್ಲಿ ಕಳೆದ ವರ್ಷ 2004–05ರಲ್ಲಿ 1565 ಕೋಟಿ ಪ್ಲಾನ್ ಅಲೊಕೇಷನ್ ಇದ್ದರೆ ಈ ಸಲ 2880 ಕೋಟಿಯಾದಗಿದೆ. It is a big jump in one year ಇನ್ನೂ ಹೆಚ್ಚು ಮಾಡಬೇಕೆಂಬ ನಿಮ್ಮ ಅಭಿಪ್ರಾಯ ಇದೆಯಲ್ಲಾ ಅದರ ಬಗ್ಗೆ ಈಗ ಅಬ್ಕಾರಿಯಲ್ಲಿ ದುಡ್ಡು ಹೆಚ್ಚಾಗಿ ಬಂದಿದೆ ಎಂದಿದ್ದಾರೆ. ಹಾಗೆಯೇ ಇನ್ನೊಂದು ಕಡೆ ಸ್ಟ್ಯಾಂಪ್ ಡ್ಯೂಟಿಯಲ್ಲಿ ಕಡಿಮೆಯಾಗುತ್ತಿದೆ. ಅಬ್ಕಾರಿಯಲ್ಲಿ ಬರುತ್ತಿದೆ. ಸ್ಟ್ಯಾಂಪ್ ಅಂಡ್ ರಿಜಿಸ್ಟ್ರೇಷನ್ಸ್‌ನಲ್ಲಿ ಕಡಿಮೆಯಾಗುತ್ತಿದೆ. ಇದನ್ನೆಲ್ಲಾ ಸರಿದೂಗಿಸಿಕೊಂಡು ನೋಡೋಣ, ನಾವು ಅದಕ್ಕೆ ಗ್ರಾಮೀಣಾಭಿವೃದ್ಧಿ ಬಗ್ಗೆ ಈ ಸರ್ಕಾರಕ್ಕೆ ಬದ್ಧತೆ ಇದೆ, ಅದರಿಂದ ಅದರ ಬಗ್ಗೆ ಗಂಭೀರವಾಗಿ ಪರಿಶೀಲನೆ ಮಾಡುತ್ತೇವೆ.